**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿ ಡಬ್ಲೂಃ** 33, **ಪಿ ಡಬ್ಲೂಃ** 7

**ಸಾಕ್ಷಿಯನ್ನು ದಿನಾಂಕಃ** 13-02-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಪಿ. ಪಿ. ಅವರಿಂದ**

ಮಹಜರು ಕಾಲದಲ್ಲಿ ವಿಡಿಯೋ ತೆಗೆಸಿದ್ದು ಅದರ ಸಿಡಿಯನ್ನು ಈಗ ನೋಡುತ್ತಿದ್ದು, ಅದನ್ನು ಮು ಮಾ **5** ಎಂದು ಗುರುತಿಸಲಾಯಿತು. ತನಿಖೆ ಪೂರೈಸಿ ಆರೋಪ ಸಾಬೀತಾದ ಕಾರಣ ಆರೋಪ ಪಟ್ಟಿ ಸಲ್ಲಿಸಿರುತ್ತೇನೆ. ಆ ದಿನ ನಾವು ಟ್ರಾಪ್ ಮಾಡಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತನೇ ಆಗಿದ್ದಾನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು ಬಿ ಆರ್., ವಕೀಲರಿಂದಃ**

ನಿಪಿಃ 27 ರಲ್ಲಿ ಮೊದಲ ಅರ್ಧ ಭಾಗ ಹಾಗೂ ಕಡೆಯ ಅರ್ಧ ಭಾಗ ಬರವಣಿಗೆಯಲ್ಲಿ ವ್ಯತ್ಯಾಸವಿದೆ ಅಂದರೆ ಸರಿಯಲ್ಲ. ಮೊದಲನೆ ಪುಟದ ಕೆಳಗಿನಿಂದ 4 ನೇ ಸಾಲಿನಲ್ಲಿ ದಿಃ 22-07-2014 ಎಂದು ಚಿಕ್ಕ ಅಕ್ಷರದಲ್ಲಿ ಸೇರಿಸಲಾಗಿದೆ ಅಂದರೆ ಸರಿ. ಪಿರ್ಯಾದಿಯ ಟ್ರಕ್ ಚಾಕಲನ ಹೆಸರು ಹನುಮಂತಪ್ಪ ಅಂದರೆ ಸರಿ. ನಿಪಿಃ 27 ರಲ್ಲಿ ರೂ. 1,000/- ಹಣಕ್ಕೆ ಬೇಡಿಕೆ ಇಟ್ಟು ಚಾಲಕನ ಮೊಬೈಲ್ ಕಸಿದ ಬಗ್ಗೆ ಎಂದು ನಮೂದಾಗಿದೆ ಅಂದರೆ ಸರಿ.

ನಿಪಿಃ 27 ರಲ್ಲಿ ಎಲ್ಲಿಯೂ ಪಿರ್ಯಾದಿಗೆ ಸಂಬಂಧಿಸಿದ ಕೆಲಸ ಬಾಕಿ ಇಲ್ಲ ಆತ ಹಣ ಕೇಳಿರುವುದಿಲ್ಲ ಎಂದು ನಮೂದಾಗಿಲ್ಲ ಅಂದರೆ ಸರಿ. 22 ನೇ ತಾರೀಖು ದೂರು ದಾಖಲಿಸಲು ಯಾವುದೇ ಅಡ್ಡಿ ಇರಲಿಲ್ಲ ಅಂದರೆ ವಾಯಿಸ್ ರೆಕಾರ್ಡಿಂಗ್ ಇಲ್ಲದ ಕಾರಣ ವಾಯಿಸ್ ರೆಕಾರ್ಡರ್ ಕೊಟ್ಟು ಕಳುಹಿಸಿದ್ದೇನೆ ಎಂದು ನುಡಿಯುತ್ತಾರೆ. ವಾಯಿಸ್ ರೆಕಾರ್ಡರ್ ಪಿರ್ಯಾದಿಗೆ ಕೊಟ್ಟ ಬಗ್ಗೆ ಹಿಂಬರಹ ಪಡೆದಿಲ್ಲ ಅಂದರೆ ಸರಿ.

ದಿನಾಂಕ 23 ರಂದು ಭೀಮಪ್ಪ ಹಾಗೂ ಹನುಮಂತಪ್ಪ ರವರನ್ನು ಸಾಕ್ಷಿಯನ್ನಾಗಿ ಮಾಡುವ ಉದ್ದೇಶದಿಂದ ಅವರ ಹೆಸರನ್ನು ನಮೂದಿಸಿದ್ದೇನೆ ಅಂದರೆ ಸರಿಯಲ್ಲ. ಮರು ಹೇಳಿಕೆ ಪಡೆದ ಸಮಯ ನಮೂದು ಮಾಡಿಲ್ಲ ಅಂದರೆ ಸರಿ. ನಾನು ಹೇಳಿದಂತೆ ಪಿರ್ಯಾದಿಯಾಗಲಿ ಆತನ ಚಾಲಕ ಹಾಗೂ ಕ್ಲಿನರ್ ನನಗೆ ದೂರು ಕೊಟ್ಟಿಲ್ಲ ಅಂದರೆ ಸರಿಯಲ್ಲ.

ನಾನು ಹೇಳಿದಂತೆ ಪಂಚರನ್ನು ಕಚೇರಿಗೆ ಕರೆಯಿಸಿ ಅವರಿಗೆ ಟ್ರಾಫ್ ಡೆಮೋ ಮಾಡಿದ್ದಾಗಲಿ, ವಾಯಿಸ್ ರೆಕಾರ್ಡ ಕೇಳಿಸಿದ್ದಾಗಲಿ ಪಿರ್ಯಾದಿಯಿಂದ ರೂ. 600/- ಪಡೆದು ಪೌಡರ್ ಸಿಂಪಡಿಸಿ ಆರೋಪಿ ಕೇಳಿದಲ್ಲಿ ಅದನ್ನು ಕೊಡುವಂತೆ ಹೇಳಿದ್ದಾಗಲಿ, ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ಕಚೇರಿಯಿಂದ ಕಲ್ಲಹಳ್ಳಿ ಚೆಕ್‌ಪೋಸ್ಟ 10 ಕಿ ಮೀ ಅಂತರ ಇದೆ. ಅದು ವಾಹನ ಸಂಚಾರ ಇರುವ ಜಾಗ ಅಂದರೆ ಸರಿ. ನಾನು ಕಲ್ಲಹಳ್ಳಿ ಚೆಕ್ ಪೋಸ್ಟ ಬಳಿ ಹೋಗುವಷ್ಟರಲ್ಲಿ ಕತ್ತಲು ಆಗಿತ್ತು ಅಂದರೆ ಸರಿಯಲ್ಲ. ನಾನು 500 ಮೀಟರ್ ದೂರದಲ್ಲಿ ಇದ್ದೆ. ಹತ್ತಿರದಲ್ಲಿ ಗುಡಿಸಲು ಹೋಟೆಲ್ ಇತ್ತು ಅಂದರೆ ಸರಿ. ಕಲ್ಲಹಳ್ಳಿ ಚೆಕ್ ಪೋಸ್ಟ ಬಳಿ ಲಾರಿ ಚಾಲಕರು ಸೀಲ್ ಹಾಕಿಸಿಕೊಳ್ಳಲು ನಿಂತಿದ್ದರು ಅಂದರೆ ಸರಿ. ಹೋಟೆಲ್ ಒಳಗಡೆ ನಡೆದ ವಿಚಾರ ನನಗೆ ಖುದ್ದಾಗಿ ಗೊತ್ತಿಲ್ಲ ಅಂದರೆ ಸರಿ.

ಪಿರ್ಯಾದಿ, ನೆರಳು ಸಾಕ್ಷಿ ಹಾಗೂ ಚಾಸಾ -11 ಮತ್ತು 12 ರವರು ನನ್ನ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಅಂದರೆ ಸರಿಯಲ್ಲ. ನಿಪಿಃ 2 ರಲ್ಲಿ ನೆರಳು ಸಾಕ್ಷಿ ಸ್ವಲ್ಪ ದೂರದಲ್ಲಿ ನಿಂತಿದ್ದರು ಎಂದು ನಮೂದಾಗಿದೆ ಅಂದರೆ ಸರಿ. ನೆರಳು ಸಾಕ್ಷಿ 5 ಅಡಿ ದೂರದಲ್ಲಿ ಇದ್ದೆ ಎಂದು ನನ್ನ ಮುಂದೆ ಹೇಳಿರುವುದಿಲ್ಲ. ಟ್ರಾಫ್ ಪಂಚನಾಮೆ ಸ್ಥಳದಲ್ಲೇ ಮಾಡಬೇಕು ಅಂದರೆ ಅನಾನುಕೂಲತೆ ಇದ್ದರೆ ಬೇರೆ ಕಡೆ ಮಾಡಬಹುದು.

ನಾವು ಹೋಟೆಲ್ ನಲ್ಲಿ ಯಾವುದೇ ಪಂಚನಾಮೆ ಮಾಡಿಲ್ಲ ಅಂದರೆ ಸರಿ. ಕಲ್ಲಹಳ್ಳಿ ಚೆಕ್ ಪೋಸ್ಟ್ ಬಳಿ ಸಿ ಸಿ ಕ್ಯಾಮರಾ ಇದೆ ಅಂದರೆ ಸರಿ. ನಾವು ಪಂಚನಾಮೆ ಮಾಡಿದ ಜಾರ ಸಿ ಸಿ ಟಿವಿ ವ್ಯಾಪ್ತಿಯಲ್ಲಿ ಇಲ್ಲ ಅಂದರೆ ಸರಿ. ಉದ್ದೇಶಪೂರ್ವಕವಾಗಿ ನಿಜಾಂಶ ಮರೆಮಾಚಲು ಸಿ ಸಿ  ಕ್ಯಾಮರಾ ವ್ಯಾಪ್ತಿಯಲ್ಲಿ ಪಂಚನಾಮೆ ಮಾಡಿಲ್ಲ ಅಂದರೆ ಸರಿಯಲ್ಲ. ಆರೋಪಿಯನ್ನು ಬಂಧಿಸಿದಾಗ ತಾನು ಯಾವುದೇ ಹಣ ಪಡೆದಿಲ್ಲ, ಮೊದಲು ಕೈಗಳನ್ನು ತೊಳೆಸಿ ಎಂದು ಆತ ಕೇಳಿಕೊಂಡಿದ್ದ. ನಾನು ಲೋಕಾಯುಕ್ತ ಕಚೇರಿಯಲ್ಲಿ ವಿಚಾರಣಾಧಿಕಾರಿಗಳ ಮುಂದೆ ಹೇಳಿಕೆ ನೀಡಿದ್ದೇನೆ ಅಂದರೆ ಸರಿ. ಅದನ್ನು ಈಗ ನೋಡುತ್ತಿದ್ದು, ಅದನ್ನು ನಿಡಿಃ 1 ಎಂದು ಗುರುತಿಸಲಾಯಿತು. ಅದರಲ್ಲಿ **"ಟ್ರಾಪ್ ಪಂಚನಾಮೆ ನಾವು ಕಚೇರಿಯಲ್ಲಿ ತಯಾರು ಮಾಡಿ ನಂತರ ಎಲ್ಲರ ಸಹಿ ಪಡೆದಿದ್ದೇನೆ ಅಂದರೆ ಸರಿ"** ಎಂದು ನಮೂದಾಗಿದೆ ಅಂದರೆ ನಾನು ಆ ರೀತಿ ಹೇಳಿಲ್ಲ ಆ ಭಾಗವನ್ನು ನಿಡಿಃ 1 (ಎ) ಎಂದು ಗುರುತಿಸಲಾಯಿತು. ಅದೇ ರೀತಿ ಪ್ಯಾರಾ 23 ರಲ್ಲಿ **"ನಾವು …….. ನಡೆಸಲಿಲ್ಲ ಅಂದರೆ ಸರಿ"** ಎಂದು ನಿಡಿಃ 1 (ಬಿ) ರಂತೆ ಹೇಳಿಕೆ ನೀಡಿದ್ದೇನೆ ಅಂದರೆ ನಾನು ಆ ರೀತಿ ಹೇಳಿಕೆ ನೀಡಿಲ್ಲ.

ನಿಪಿಃ 2 ನ್ನು ಕಚೇರಿಯಲ್ಲಿ ಜರುಗಿಸಿದ್ದೇನೆ ಅಂದರೆ ಸರಿಯಲ್ಲ. ಆ ಕಾಲದಲ್ಲಿ ಪಿರ್ಯಾದಿ ಹಾಗೂ ಸಾಕ್ಷಿದಾರರು ಇರಲಿಲ್ಲ ಅಂದರೆ ಸರಿಯಲ್ಲ. ಆರೋಪಿಯಿಂದ ಯಾವುದೇ ಲಂಚದ ಹಣವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚನಾಮೆ ಮಾಡಿ ಕೈ ತೊಳೆಸಿದಾಗ ಗುಲಾಬಿ ಬಣ್ಣಕ್ಕೆ ತಿರುಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಮು ಮಾ 2 ಆರೋಪಿಯಿಂದ ಜಪ್ತು ಮಾಡಿಲ್ಲ ಅಂದರೆ ಸರಿ. ಚೆಕ್ ಪೋಸ್ಟ್ ನಲ್ಲಿ ಅರಣ್ಯ ಇಲಾಖೆ, ಗಣಿ ಭೂ ವಿಜ್ಞಾನ, ವಾಣಿಜ್ಯ ತೆರಿಗೆ ಹಾಗೂ ಪೋಲಿಸರು ಜಂಟಿಯಾಗಿ ಕರ್ತವ್ಯ ನಿರ್ವಹಿಸುತ್ತಾರೆ ಅಂದರೆ ಸರಿ. ಎಲ್ಲರೂ ಸೀಲ್ ಹಾಕಿದ ನಂತರ ಲಾರಿ ಬಿಡುತ್ತಾರೆ ಅಂದರೆ ಸರಿ. ರಹದಾರಿ ಇಲ್ಲದಿದ್ದರೂ ಅಧಿಕಾರಿಗಳು ಅಕ್ರಮವಾಗಿ ಲಾರಿ ಬಿಡುತ್ತಿದ್ದ ವಿಚಾರಕ್ಕೆ ಅವರಲ್ಲಿ ಭಿನ್ನಾಭಿಪ್ರಾಯಗಳು ಇದ್ದವು ಅಂದರೆ ನನಗೆ ಗೊತ್ತಿಲ್ಲ.

ಆರೋಪಿ ನಿಷ್ಠೆಯಿಂದ ಕೆಲಸ ಮಾಡುತ್ತಿದ್ದು ಆತನನ್ನು ಅಲ್ಲಿಂದ ಹೊರಹಾಕಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ರಹದಾರಿ ಪಿಶಯಿೊದಿಯ ಲಾರಿಗೆ ಸಂಬಂಧಿಸಿದ್ದು ಅಂದರೆ ಸರಿ. ಅದನ್ನು ನಿಡಿಃ 2 ಎಂದು ಗುರುತಿಸಲಾಯಿತು. ಅದರಲ್ಲಿ ಅರಣ್ಯ ಇಲಾಖೆ ಹಾಗೂ ವಾಣಿಜ್ಯ ತೆರಿಗೆ ಇಲಾಖೆಯ ಸೀಲ್ ಇಲ್ಲ ಅಂದರೆ ಸರಿ. ಆರೋಪಿ ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಲಂಚ ಪಡೆಯದಿದ್ದರೂ ಸಹ ಅಂಕಿ ಅಂಶಕ್ಕಾಗಿ ಟ್ರಾಫ್ ಯಶಸ್ವಿ ಎಂದು ಘೋಷಿಸಿದ್ದೇನೆ ಅಂದರೆ ಸರಿಯಲ್ಲ.

ನಿಡಿಃ 6 ರಿಂದ 25 ರಲ್ಲಿ ಪಿರ್ಯಾದಿ ಹಾಗೂ ನೆರಳು ಸಾಕ್ಷಿಗಳು ಇಲ್ಲ ಅಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿಗಳ ಹೇಳಿಕೆ ಪಡೆದಿಲ್ಲ, ಪಿರ್ಯಾದಿಯ ಸ್ವ ಇಚ್ಛಾ ಹೇಳಿಕೆ ಪಡೆದಿಲ್ಲ ಅಂದರೆ ಸರಿಯಲ್ಲ. ವಾಯಿಸ್ ರೆಕಾರ್ಡರ್ ನಲ್ಲಿ ಟ್ರಾಫ್ ಕಾಲದಲ್ಲಿ ಯಾವುದೇ ಧ್ವನಿ ಮುದ್ರಣ ಆಗಿಲ್ಲ ಅಂದರೆ ಸರಿ. ಧ್ವನಿ ಮುದ್ರಕದಲ್ಲಿ ಆರೋಪಿಯ ಧ್ವನಿ ಇಲ್ಲದೇ ಇದ್ದರೂ ಸುಳ್ಳು ಆರೋಪ ಪಟ್ಟಿ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ವಿಜಯನಗರ ಜಿಲ್ಲೆ, ಹೊಸಪೇಟೆ.